# ಖಾದಿಯಲ್ಲಿ ನವಿಲು, ಗಂಡಭೇರುಂಡ!



ಖಾದಿ ಬಟ್ಟೆ ಎಂದರೆ ಅದು ಫ್ಯಾಷನ್‌ಗೆ ಸೂಕ್ತವಲ್ಲ ಎಂಬ ಕಾಲವಿತ್ತು. ಆದರೆ ರೇಷ್ಮೆಬಟ್ಟೆಯಂತೆ ಖಾದಿಯಲ್ಲೂ ಕುಂದನ್, ಜರ್ದೋಸಿ ಬಳಸಿ ಎಂಬ್ರಾಯಿಡರಿ ಮಾಡಿದ ಬ್ಲೌಸ್ ಈಗ ಫ್ಯಾಷನ್ ಟ್ರೆಂಡ್ ಆಗಿದೆ. ಜೊತೆಗೆ ಖಾದಿಯಲ್ಲೇ ತಯಾರಿಸಿದ ಕುರ್ತಿ, ಪೈಜಾಮ, ಧೋತಿ, ಪಲಾಜೋಗಳೂ ಫ್ಯಾಷನಬಲ್ ಎನಿಸಿವೆ.

■ **ಉಮಾ ಅನಂತ್**

ಖಾದಿ ಉಡುಗೆ ಇದೀಗ ಫ್ಯಾಷನ್ ಟ್ರೆಂಡ್ ಆಗಿದೆ. ಹಿಂದೆಲ್ಲ ಖಾದಿ ಎಂದರೆ ಅದು ರಾಷ್ಟ್ರೀಯ ಹಬ್ಬಕ್ಕೆ ತೊಡುವ ಬಟ್ಟೆಯಾಗಿತ್ತು. ಸ್ವಾತಂತ್ರ್ಯ ಹೋರಾಟಗಾರರು, ರಾಜಕಾರಣಿಗಳು, ಗಾಂಧಿವಾದಿಗಳು ಮಾತ್ರ ಈ ಬಟ್ಟೆ ತೊಡುತ್ತಿದ್ದರು. ಆದರೆ ಈಗ ಖಾದಿ ಫ್ಯಾಷನ್ ಲೋಕದಲ್ಲಿ ಸದ್ದುಮಾಡುತ್ತಿದೆ. ಆಧುನಿಕ ಮನೋಭಾವದ ಯುವತಿಯರು, ಕಾಲೇಜು ಕನ್ಯೆಯರು, ಸೆಲೆಬ್ರಿಟಿಗಳು ಖಾದಿ ಉಡುಪಿಗೆ ಮಾರುಹೋಗಿದ್ದಾರೆ. ಸ್ವಾತಂತ್ರ್ಯ ದಿನ ಸಮೀಪಿಸುವ ಈ ಹೊತ್ತಿನಲ್ಲಿ ಖಾದಿಯಲ್ಲಿ ನವೀನ ವಿನ್ಯಾಸದ ಉಡುಗೆಗಳನ್ನು ವಿನ್ಯಾಸಗಾರರು ತಯಾರಿಸಿ ಮಾರುಕಟ್ಟೆಗೆ ತರುತ್ತಿದ್ದಾರೆ. ಖಾದಿ ಜುಬ್ಬ, ಕುರ್ತಾ, ಟಾಪ್, ಸ್ಕರ್ಟ್, ದುಪಟ್ಟಾ.. ಎಲ್ಲವೂ ಬಂದಿದೆ. ಸೀರೆಯಲ್ಲೂ ಖಾದಿಯ ಝಲಕ್ ಇದೆ. ಖಾದಿಯಲ್ಲಿ ತಯಾರಿಸಿದ ಬ್ಲೌಸ್ ಕೂಡ ಬಂದಿದ್ದು, ಅದರ ಮೇಲೆ ಹಲವು ವೈವಿಧ್ಯಮಯ ವಿನ್ಯಾಸ, ಎಂಬ್ರಾಯಿಡರಿ ಮಾಡಿದ ರವಿಕೆಗಳು ಇದೀಗ ಲಭ್ಯ.

ಖಾದಿ ಬಟ್ಟೆಗಳೆಂದರೆ ಅದು ಹಿರಿಯ ವ್ಯಕ್ತಿಗಳಿಗಷ್ಟೇ ಸೀಮಿತ ಎಂಬ ಅಭಿಪ್ರಾಯ ಈಗ ಬದಲಾಗಿದೆ. ಖಾದಿಯಲ್ಲೂ ಇದೀಗ ಆಧುನಿಕ ವಿನ್ಯಾಸಗಳ ಉಡುಪುಗಳು ಲಭ್ಯವಿದ್ದು, ಖಾದಿ ಕಾಟನ್ ಕುರ್ತಿ, ಸೀರೆಗಳು, ಲಂಗ ದಾವಣಿ, ಸಲ್ವಾರ್‌ಗಳು ಫ್ಯಾಷನ್‌ಪ್ರಿಯರ ಮನತಣಿಸುತ್ತಿದೆ. ಜೊತೆಗೆ ಯುವತಿಯರಿಗೆ ಶಾರ್ಟ್ ಟಾಪ್, ಸ್ಕರ್ಟ್, ಶರ್ಟ್‌ಗಳು, ಪೈಜಾಮ, ಕೇಪ್ರಿ ಪ್ಯಾಂಟ್, ಶೆರವಾನಿ, ಪಲಾಜೋಗಳೂ ಕೂಡ ಖಾದಿಯ ವೈವಿಧ್ಯತೆಯನ್ನು ಹೆಚ್ಚಿಸಿದೆ.

ಹಾಗೆ ನೋಡಿದರೆ ಖಾದಿ ಅಪ್ಪಟ ದೇಸಿ ವಸ್ತ್ರ. ಇದು ಸ್ವಾಭಿಮಾನದ ಸಂಕೇತ. ಮಹಾತ್ಮ ಗಾಂಧೀಜಿ ಖಾದಿ ಬಟ್ಟೆಗೆ ಹೆಚ್ಚಿನ ಆದ್ಯತೆ ತೋರುತ್ತಿದ್ದರಲ್ಲದೆ ಎಲ್ಲರೂ ದೇಸಿ ಉಡುಪಿನತ್ತ ಮೋಹ ಬೆಳೆಸಿಕೊಳ್ಳಬೇಕೆಂದು ಹಂಬಲಿಸಿದ್ದರು. ಇದು ದೇಸಿ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ ಎಂಬುದು ಇದಕ್ಕೆ ಕಾರಣ.

ಖಾದಿ ಉಡುಪು ಈಗ ಫ್ಯಾಷನ್ ಲೋಕದಲ್ಲಿ ಸಖತ್ ಆಗಿ ಮಿಂಚುತ್ತಿದೆ. ಎಲ್ಲ ವಯಸ್ಸಿನ ಮಹಿಳೆಯರೂ ದೇಸಿ ಸಂಸ್ಕೃತಿಯನ್ನು ಪ್ರತಿನಿಧಿಸಿ ಈ ಬಟ್ಟೆಯಲ್ಲಿ ಆಪ್ತತೆ ಬೆಳೆಸಿಕೊಳ್ಳಬೇಕು ಎಂಬುದು

